ದಿನಾಂಕ **06.12.2019** 4 ಓ ಎಸ್ . ನಂ. 128/2015

ಪಿ.ಡಬ್ಲ್ಯೂ.2

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಲ್.ಜಿ.ಜಿ ರವರಿಂದಃ-</u>

ನಾನು ಮತ್ತು 1 ನೇ ಪ್ರತಿವಾದಿ ಹಾಗೂ ಅವರ ಪತ್ನಿ ಒಂದೇ ಜಾತಿ ಮತ್ತು ಒಂದೇ ಊರಿನವರು ಎಂದರೆ ಸರಿ. ಆದರೆ ನಾವು ಸಂಬಂಧಿಕರಲ್ಲ. ನಾನು ದಾವಾ ಸ್ವತ್ತನ್ನು ನೋಡಿದ್ದೇನೆ. ದಾವಾ ಸ್ವತ್ತು ರಾಮನಗರ ಮಾಗಡಿ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮಾವಿನ ತೋಟ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ರಾಗಿ ಬೆಳೆಯುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಊರಿನಲ್ಲಿ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಅಂಗಡಿ ಮತ್ತು ಮನೆ ಇವೆ ಎಂದರೆ ಸಾಕ್ಷಿಯು ಈಗ ಒಂದು ವರ್ಷದ ಹಿಂದೆ ಮನೆ ಕಟ್ಟಿದ್ದಾರೆ ಅಂಗಡಿ ಇಲ್ಲ, ಸಾಕ್ಷಿಯು ಪುನಃ ತೋಟಗಾರಿಕೆ ಇಲಾಖೆಯಿಂದ ಸಾಲ ಪಡೆದು ಮ್ಯಾಂಗೋ ಹೌಸ್ ಎಂದು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸಾಲ ಪಡೆದ ವಿಚಾರ ಮತ್ತು ಮನೆ ಕಟ್ಟಿದ ವಿಚಾರ ನನಗೆ ಯಾರು ಹೇಳಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ತಾಯಿ ಮತ್ತು ಅಣ್ಣ ತೀರಿಹೋಗಿದ್ದಾರೆ. ಅತ್ತಿಗೆ ಇದ್ದಾರೆ. 1 ನೇ ಪ್ರತಿವಾದಿಯ ಅಣ್ಣನಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕ್ರಯದ ಕರಾರು ಆಗುವ ಸಮಯದಲ್ಲಿ 1 ನೇ ಪ್ರತಿವಾದಿಯ ತಾಯಿ ತೀರಿಹೋಗಿದ್ದರು. ಅವರು 2003 ರಲ್ಲಿ ತೀರಿಹೋಗಿದ್ದರು. ಕ್ರಯದ ಕರಾರು ಆಗುವ ಸಮಯದಲ್ಲಿ ಈ ದಾವೆಯ

ಸ್ವತ್ತು ನಿಂಗಮ್ಮ ಅಂದರೆ 1 ನೇ ಪ್ರತಿವಾದಿಯ ತಾಯಿಯ ಹೆಸರಿನಲ್ಲಿತ್ತು. ಈ ದಾವಾ ಸ್ವತ್ತನ್ನು ಬಿಟ್ಟರೆ 1 ನೇ ಪ್ರತಿವಾದಿಗೆ ನಮ್ಮ ಊರಿನಲ್ಲಿ ಬೇರೆ ಸ್ವತ್ತು ಇದೆ.

ಕ್ರಯದ ಕರಾರು ಆಗುವ ಸಮಯದಲ್ಲಿ 1 ನೇ ಪ್ರತಿವಾದಿ ವಾದಿಗೆ ವಿಭಾಗ ಪತ್ರ, ನಿಂಗಮ್ಮನವರ ಮರಣ ಪ್ರಮಾಣ ಪತ್ರವನ್ನು ಕೊಟ್ಟಿದ್ದರು. ಅವುಗಳನ್ನು ಬಿಟ್ಟರೆ ಬೇರೆ ದಾಖಲೆಗಳನ್ನು ಹಾಜರು ಮಾಡಿಲ್ಲ. ವಿಭಾಗ ಪತ್ರವನ್ನು ನಾನು ನೋಡಿದ್ದೇನೆ. ವಿಭಾಗ ಪತ್ರದ ಮೂಲಕ 1 ಎಕರೆ ಆಸ್ತಿ 1 ನೇ ಪ್ರತಿವಾದಿಗೆ ಬಂದಿದೆ. ಉಳಿಕೆ ಜಮೀನು 1 ನೇ ಪ್ರತಿವಾದಿಯ ಅತ್ತಿಗೆ ಜವರಮ್ಮನವರಿಗೆ ಬಂದಿದೆ. ವಿಭಾಗ ಪತ್ರ ಎಷ್ಟನೇ ಇಸವಿಯಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ.ಆದರೆ 1 ನೇ ಪ್ರತಿವಾದಿಯ ತಾಯಿ ಇದ್ದಾಗ ವಿಭಾಗ ಪತ್ರ ಆಗಿತ್ತು. ವಿಭಾಗ ಪತ್ರ ನೊಂದಣಿ ಆಗಿರಲಿಲ್ಲ. ವಿಭಾಗ ಪತ್ರದ ಮೂಲ ಪ್ರತಿ ವಾದಿಗೆ ಕೊಟ್ಟಿದ್ದಾರೆ. ಕ್ರಯದ ಕರಾರು ಅಗುವ ಸಮಯದಲ್ಲಿ ಈ ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳು ಅವರವರ ಹೆಸರಿಗೆ ಬದಲಾವಣೆ ಆಗಿರಲಿಲ್ಲ ಎಂದರೆ ಸರಿ. ನಾನು ಕ್ರಯದ ಕರಾರನ್ನು ಓದಿ ಸಹಿ ಮಾಡಿದ್ದೆ.

ಕ್ರಯದ ಕರಾರಿನಲ್ಲಿ ಯಾವ ವರ್ಷ ವಿಭಾಗ ಪತ್ರ ವಾಗಿತ್ತು ಮತ್ತು ಆ ವಿಭಾಗ ಪತ್ರದಲ್ಲಿ ಯಾರು - ಯಾರಿಗೆ ಎಷ್ಟೇಷ್ಟು ಆಸ್ತಿ ಕೊಟ್ಟಿದ್ದಾರೆ ಎಂದು ಬರೆದದ್ದನ್ನು ನಾನು ನೋಡಿದ್ದೇನಾ ಎಂದರೆ ಸಾಕ್ಷಿಯು 1 ಎಕರೆ ದಾವಾ ಸ್ವತ್ತಿನ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಅಲ್ಲದೇ 1 ನೇ ಪ್ರತಿವಾದಿಯ ಕುಟುಂಬಕ್ಕೆ 2 ಎಕರೆ ಆಸ್ತಿ ಇದೆ. ಮ್ಯಾಂಗೋ ಹೌಸ್ ಅನ್ನು ದಾವಾ ಸ್ವತ್ತನ್ನು ಬಿಟ್ಟು ಉಳಿಕೆ ಜಾಗದಲ್ಲಿ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ಕಟ್ಟಿದ್ದಾರೆ ಎಂದು

ನುಡಿಯುತ್ತಾರೆ. ಯಾರ ಹೆಸರಿನಲ್ಲಿ ಸಾಲ ಪಡೆದಿದ್ದಾರೆ ಮತ್ತು ಯಾರ ಹೆಸರಿನಲ್ಲಿ ಮನೆ ಕಟ್ಟಿದ್ದಾರೆ ಎಂದು ನಾನು ದಾಖಲೆ ನೋಡಿದ್ದೇನಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಎಂದು ನುಡಿಯುತ್ತಾರೆ. ಆದರೆ ದಾಖಲೆ ನೋಡಿಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ನಮ್ಮ ಊರಿನ ಮುಖ್ಯ ರಸ್ತೆಯ ಪಕ್ಕದಲ್ಲಿರುವ 1 ಎಕರೆ ಜಮೀನಿಗೆ ಮಾರುಕಟ್ಟೆ ಬೆಲೆ 25 ಲಕ್ಷ ರೂ. ಆಗಿರುತ್ತದೆ. ನಾನು ಈಗ ನೋಡುತ್ತಿರುವ ಕರ್ನಾಟಕ ರಾಜ್ಯ ಪತ್ರದ ಪ್ರಕಾರ ಹರಿಸಂದ್ರ ಗ್ರಾಮದ ರಾಮನಗರ ಮಾಗಡಿ ರಸ್ತೆಗೆ ಹೊಂದಿಕೊಂಡಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯ 1 ಎಕರೆಗೆ 25 ರಿಂದ 35 ಲಕ್ಷ ರೂ. ಇದೆ. ಮಾರಾಟದ ಬೆಲೆ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ.

ನಾನು ಸುಮಾರು ಕರಾರುಗಳಿಗೆ ನಮ್ಮ ಊರಿನ ವ್ಯವಹಾರಗಳಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಮತ್ತು ದೊಡ್ಡಯ್ಯ ಎನ್ನುವವರ ವ್ಯವಹಾರಗಳಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸದರಿ ದೊಡ್ಡಯ್ಯ ಈ ದಾವೆಯ ವಾದಿಗೆ ಮಾಡಿಕೊಟ್ಟ ಕರಾರಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೆ ಎಂದರೆ ಸರಿ. ನನಗೆ ನ್ಯಾಯಾಲಯದ ವ್ಯವಹಾರ ಮತ್ತು ಉಪನೊಂದಣಿ ಕಚೇರಿಯ ವ್ಯವಹಾರಗಳ ಬಗ್ಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ನಮ್ಮ ಕೇಸುಗಳಿಗೆ ಬರುತ್ತೇನೆ ಎಂದು ನುಡಿಯುತ್ತಾರೆ.

ದಾಖಲೆ ಮಾಡಿಕೊಡುವ ವ್ಯಕ್ತಿಯ ಹೆಸರು ಪಹಣಿಯಲ್ಲಿದ್ದರೆ ಮಾತ್ರ ಅಂತಹ ದಾಖಲೆಯನ್ನು ಉಪನೊಂದಣಿ ಕಚೇರಿಯಲ್ಲಿ ನೊಂದಣಿ ಮಾಡುತ್ತಾರೆ ಎಂದರೆ ಸಾಕ್ಷಿಯು ದಾಖಲೆಗಳಿಗೆ ಅನ್ವಯಿಸಿದರೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಪಂಚಾಯತ್ ಪಾರಿಕತ್ತ್

ಆಧಾರದಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಅತ್ತಿಗೆಯ ಹೆಸರಿಗೆ ದಾಖಲೆಗಳು ಬದಲಾವಣೆ ಆಗಿಲ್ಲ. 2003 ನೇ ಇಸವಿಗಿಂತ ಮೊದಲು ಪಂಚಾಯತ್ ಪಾರಿಕತ್ತ್ ಆಧಾರದಲ್ಲಿ ರೆವಿನ್ಯೂ ದಾಖಲೆಗಳನ್ನು ಬದಲಾಯಿಸಲು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿದ್ದರಾ ಎಂದರೆ ಸಾಕ್ಷಿಯು ಹಾಕಿದ್ದೇವೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಈಗಲೂ ದಾವಾ ಸ್ವತ್ತು 1 ನೇ ಪ್ರತಿವಾದಿಯ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಯಾವುದೇ ಪಂಚಾಯತ್ ಪಾರಿಕತ್ತ್ ಅಥವಾ ವಿಭಾಗ ಪತ್ರ 1 ನೇ ಪ್ರತಿವಾದಿ ಮತ್ತು ಅವರ ಅತ್ತಿಗೆಯ ಮಧ್ಯೆ ಆಗಿಲ್ಲ ಎಂದರೆ ಆಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಸ್ವತ್ತು ಈಗಲೂ 1 ನೇ ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಕಾರಣ ಸದರಿ ಪಂಚಾಯತ್ ಪಾರಿಕತ್ತ್ ಅನ್ನು ನ್ಯಾಯಾಲಯಕ್ಕೆ ಅಥವಾ ಕರಾರು ಪತ್ರ ನೊಂದಣಿ ಮಾಡುವಾಗ ನೊಂದಣಿ ಕಚೇರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಪಂಚಾಯತ್ ಪಾರಿಕತ್ತ್ ಆಗಿದೆ ಎಂದು ನುಡಿಯುತ್ತಾರೆ. ನಾನೇ ಖುದ್ದಾಗಿ ನಿಂತು 1 ನೇ ಪ್ರತಿವಾದಿಗೆ ಕೈ ಸಾಲ ಕೊಡಿಸಿದ್ದೆ ಎಂದರೆ ಸಾಲ ಅಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿಗಳು ಅವಿದ್ಯಾವಂತರಾದ ಕಾರಣ ಸಾಲ ಪತ್ರ ಮಾಡುವ ಬದಲು ಪ್ರತಿವಾದಿಗಳಿಗೆ ಮೋಸ ಮಾಡಲು ಹಾಗೂ ದಾವಾ ಸ್ವತ್ತು ಹೊಡೆದು ಕೊಳ್ಳಲು ಉಪ ನೊಂದಣೆ ಕಚೇರಿಯಲ್ಲಿ ಕ್ರಯದ ಕರಾರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 2012 ರಲ್ಲಿ ದಾವಾ ಸ್ವತ್ತಿನ ಮೌಲ್ಯ 18 ಲಕ್ಷ ರೂ. ಇತ್ತು ಎಂದರೆ ಸರಿಯಲ್ಲ, ಸಾಕ್ಷಿಯು 10 ಲಕ್ಷ ರೂ. ಎಂದು ನುಡಿಯುತ್ತಾರೆ.

ಪಿ.ಡಬ್ಲ್ಯೂ.2

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.